**12**

# “ತಂದೆಯು ಕುಮಾರನನ್ನು ಪ್ರೀತಿಸುತ್ತಾನೆ”

## (5:19-47)

ಕ್ರಿ.ಪೂ. 49ರಲ್ಲಿ ಜೂಲಿಯಸ್ ಸೀಜರನು ರೋಮಿನಲ್ಲಿ ಅತಿ ಹೆಚ್ಚು ಬಲವುಳ್ಳ ಮನುಷ್ಯನಾದನು. ಎರಡು ವರ್ಷಗಳವರೆಗೆ ಯುದ್ಧ ಮಾಡುತ್ತಿರುವ ಗೋತ್ರಗಳೊಂದಿಗೆ, ಹೋರಾಡುತ್ತ ಮತ್ತು ಒಬ್ಬ ಜನರಲ್‌ನಂತೆ ಹಾಗೂ ಒಬ್ಬ ಆಡಳಿತಗಾರನಂತೆ ತನ್ನ ಅಗಾಧ ವಾದ ಚತುರತೆಗಳನ್ನು ಪ್ರದರ್ಶಿಸುತ್ತ ಪಟ್ಟಣದಿಂದ ದೂರದಲ್ಲಿ ಸಮಯ ಕಳೆದನು. ಅವನ ರಾಜ ಕೀಯ ವಿರೋಧಿಗಳ ಹೆಚ್ಚಿನ ನಿರಾಶೆಗಾಗಿ, ಅವನ ಗೌಲದಲ್ಲಿಯ ಸಮಯವು ಹಿಂದೆ ರೋಮಿನಲ್ಲಿ ಕೈಸರರನ್ನು ಹೆಚ್ಚು ಬಲವುಳ್ಳವನನ್ನಾಗಿ ಮಾಡಿತು.

ರೋಮನ್ ಸೆನೇಟಿನಿಂದ ಕೈಸರನು ಹಿಂದಿರುಗಿ ಬರಬೇಕೆಂದು ಆಜ್ಞಾಪಿಸಲ್ಪಟ್ಟಾಗ, ತನ್ನ ವೈರಿಗಳು ತನ್ನನ್ನು ನಾಶಪಡಿಸಲು ಪ್ರಯತ್ನಿಸುತ್ತಿರುವರೆಂಬುದನ್ನು ತಿಳಿದುಕೊಂಡನು. ಮನೆಗೆ ಹಿಂದಿರುಗಲಿಕ್ಕೆ ಅವನು ರುಬಿಕೊನ ನದಿಯನ್ನು ದಾಟ ಬೇಕಾಗಿತ್ತು ಮತ್ತು ತನ್ನ ನಂಬಿಗಸ್ತ ಸೇನೆಯನ್ನು ಹಿಂದೆ ಬಿಡಬೇಕಾಗಿತ್ತು. ಅನೇಕ ವರ್ಷಗಳವರೆಗೆ ಈ ನದಿಯು ನಿರಂಕುಶವಾದ ಮೇರೆಯಂತೆ ಇತ್ತು. ಅದನ್ನು ದಾಟಿ ಒಂದು ಸೇನಾಪತಿಯು ತನ್ನ ಸೈನ್ಯವನ್ನು ತರಲಿಕ್ಕಿದ್ದಿಲ್ಲ, ತನ್ನ ವೈರಿಗಳು ತಮ್ಮ ಸೈನ್ಯಗಳನ್ನು ಇಟ್ಟುಕೊಳ್ಳಲು ಬಿಡಲ್ಪಡುತ್ತಿದ್ದುದರ ಕಾರಣದಿಂದ, ಕೈಸರನು ಒಬ್ಬನೇ ರೋಮನ್ನು ಪ್ರವೇಶಿಸುವುದು ಮರಣ ದಂಡನೆಯೊಳಗೆ ನಡೆದು ಹೋಗುವು ದಾಗಿರುವನೆಂಬುದನ್ನು ತಿಳಿದಿದ್ದನು. ಅದರ ಪರಿಣಾಮವಾಗಿ ರುಬಿಕೊನನು ದಾಟಿ ತನ್ನ ಸೈನ್ಯವನ್ನು ತರುವ ಮತ್ತು ಅದು ತನ್ನೊಂದಿಗೆ ರೋಮಿಗೆ ತರುವ ಧೈರ್ಯದ ನಿರ್ಣಾಯ ಮಾಡಿಕೊಂಡನು. ಕೈಸರನು “ರುಬಿಕೊನನ್ನು ದಾಟಿದನು” ಎಂಬ ಸುದ್ದಿಯು ಪಟ್ಟಣದಲ್ಲಿ ಬಂದಾಗ, ನಾಗರೀಕ ಯುದ್ಧವು ಪ್ರಾರಂಭವಾಗಿದೆ ಎಂದು ಎಲ್ಲರಿಗೂ ತಿಳಿಯಿತು. ರೋ ಮನ್ ಸೆನೇಟಿಗೆ ವಿರುದ್ಧವಾಗಿ ಅವನು ವರ್ತಿಸುತ್ತಿದ್ದನು, ಹಾಗೂ ಅವನ ವೈರಿಗಳೂ ಬೇ ಗನೇ ಪಟ್ಟಣದಿಂದ ಓಡಿಹೋದರು. ಎರಡು ತಿಂಗಳುಗಳೊಳಗಾಗಿ, ಜೂಲಿಯಸ್ ಸೀಜರನು ಎಲ್ಲಾ ವಿರೋಧಗಳನ್ನು ತುಳಿದು ಹಾಕಿದನು ಮತ್ತು ಇಡೀ ಇಟಲಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ಈ ಕಥೆಯ ಕಾರಣದಿಂದ, ರದ್ದು ಪಡಿಸಲಾಗದ ಒಂದು ನಿರ್ಣಯವನ್ನು ಇಲ್ಲವೇ ಬದಲಾಯಿಸಲಾಗದ ಒಂದು ನಿರ್ಣಾಯಕ ಕೃತ್ಯವನ್ನು ವಿವರಿಸಲು, “ರುಬಿಕೊನನ್ನು ದಾಟುವುದು” ಎಂಬ ಪದ ಪ್ರಯೋಗವು ಇಂದೂ ಸಹ ಉಪಯೋಗಿಸಲ್ಪಡುತ್ತದೆ.

ಯೋಹಾನ ಸುವಾರ್ತೆಯಲ್ಲಿ ಈ ಹಂತದವರೆಗೆ, ಯೇಸುವಿನ ಬಗ್ಗೆ ಮತ್ತು ಜನ ರೊಂದಿಗೆ ಆತನ ವ್ಯವಹಾರಗಳ ಕಥೆಗಳ ಕಡೆಗೆ ನೋಡುತ್ತಿದ್ದವು. ಅವರ ವೇದನೆಗಳನ್ನು ಗುಣಪಡಿಸುವದನ್ನು, ಅವರ ಮುರಿದ ಆತ್ಮಗಳಿಗೆ ಆದರಣೆ ಕೊಡುವುದನ್ನು, ಮತ್ತು ಜೀವನದ ಕಡೆಗೆ ಅವರನ್ನು ನಡಿಸುವದನ್ನು ನೋಡುವುದನ್ನು ನಾವು ಪ್ರೀತಿಸುತ್ತೇವೆ. 5ನೆಯ ಅಧ್ಯಾಯದ ಪ್ರಾರಂಭದಲ್ಲಿ, ಯೇಸುವು ಒಬ್ಬ ರೋಗಿಯನ್ನು ಗುಣಪಡಿಸಿದನು ಮತ್ತು ಯೆಹೂದಿ ನಾಯಕರಿಂದ ವಿರೋಧದ ಬೆಂಕಿಯ ಬಿರುಗಾಳಿಯು ಬೀಸುವಂತೆ ಮಾಡಿದನು. ನಮ್ಮ ಪಠ್ಯವು, 5:19-47, ಒಂದು ಕಥೆಯನ್ನು ಒಳಗೊಂಡಿರುವದಿಲ್ಲ. ಅದರ ಬದಲು, ಅದು ಒಂದು ಬೋಧಿಸುವ ಭಾಗವಾಗಿದ್ದು, ಅದರಲ್ಲಿ ಯೇಸುವು ಮಾತಾಡುವದನ್ನೇ ಮಾಡುತ್ತಿದ್ದಾನೆ. ಇನ್ನೊಂದು ವೃತ್ತಾಂತದ ಭಾಗವನ್ನು ಕಂಡು ಕೊಳ್ಳಲು ತ್ವರೆಪಡುವಲ್ಲಿ ಈ

ಭಾಗವನ್ನು ನಾವು ಬಿಟ್ಟು ಬಿಡಬಾರದು, ಯಾಕಂದರೆ ಸಂದಿಗ್ಧವಾಗಿ ಮಹತ್ವವಾದದ್ದೊಂದು ಇಲ್ಲಿ ಸಂಭವಿಸುತ್ತಿತ್ತು; ಯೇಸುವು "*ರುಬಿಕೊನನ್ನು ದಾಟುತ್ತಿದ್ದನು*"!

ಈ ಮೂಲ ಪಾಠದಲ್ಲಿ, ಯೇಸುವು ಎಲ್ಲರಿಗೂ "ಇದು ಯುದ್ಧ!" ಎಂದು ಘೋಷಿಸಿದ ಹೇಳಿಕೆಯನ್ನು ಕೊಡುತ್ತಿದ್ದನು. ಈ ಅಧ್ಯಾಯದ ಮೊದಲನೆಯ ಭಾಗದಲ್ಲಿ ಆತನು ಮಾಡಿದಂಥದ್ದರ ಬಗ್ಗೆ ಉಗ್ರ ಕೋಪದಿಂದ ಆತನು ಸುಲಭವಾಗಿ ಬೇರೆ ಹೋಗಬಹುದಿತ್ತು ಇಲ್ಲವೇ ಯೆಹೂದ್ಯರ ಕೋಪವನ್ನು ಶಾಂತಗೊಳಿಸಲು ಪ್ರಯತ್ನಿಸಬಹುದಿತ್ತು, ಅದರ ಬದಲು, ಆತನು "ರುಬಿಕೊನನ್ನು ದಾಟಿದನು" ಇನ್ನೊಂದು ಕಡೆಯಲ್ಲಿ ಶಿಲುಬೆಗೆ ಹಾಕಲ್ಪಡುವುದು ತನಗಾಗಿ ಕಾದಿತ್ತು ಎಂಬುದನ್ನು ತಿಳಿದುಕೊಂಡಿದ್ದನು. ಸ್ವಾಭಾವಿಕವಾಗಿ ವಾಕ್ಯಭಾಗವು ಮೂರು ಭಾಗಗಳಿಂದ ಮಾಡಲ್ಪಟ್ಟಿದೆ, ಎಲ್ಲವುಗಳಲ್ಲಿ ಯೇಸುವು ಧೈರ್ಯದ ಹೇಳಿಕೆಗಳನ್ನು ಕೊಡುತ್ತ ಅದರಿಂದ ಅಧಿಕಾರಿಗಳು ಕೋಪಗೊಂಡು ಕೊನೆಗೆ ಆತನನ್ನು ಶಿಲುಬೆಗೆ ನಡಿಸಿದ್ದನ್ನು ಕಂಡುಕೊಳ್ಳುತ್ತೇವೆ.

## ತಂದೆಯೊಂದಿಗೆ ಒಂದಾಗಿದ್ದೇನೆ ಎಂಬ ಹೇಳಿಕೆ (5:19-23)

ನಾನು ಹೆಚ್ಚಾಗಿ ನನ್ನ ತಂದೆಯಂತೆ, ವಿಶೇಷವಾಗಿ ನನ್ನ ಧ್ವನಿಯಲ್ಲಿ ಇದ್ದೇನೆ. ಒಂದು ಕೃತಜ್ಞತಾಸ್ತುತಿಯ ದಿನದಂದು, ನನ್ನ ಕೆಲವು ಒಳ್ಳೆಯ ಸ್ನೇಹಿತರು ನನ್ನ ಮನೆಗೆ ಬಂದರು. ನನ್ನ ತಂದೆ ತಾಯಿಗಳು ರಜಾದಿನಕ್ಕಾಗಿ ನಮ್ಮಲ್ಲಿಗೆ ಬಂದಿರ ಬಹುದೆಂದು ಅವರು ನಿರೀಕ್ಷಿಸಿದ್ದರು. ನಾನು ಫೋನಿನಲ್ಲಿ ಮಾತಾಡುತ್ತ ಉತ್ತರ ಕೊಟ್ಟಾಗ, ಆಚೆಕಡೆಯಲ್ಲಿದ್ದ ವ್ಯಕ್ತಿಯು, "Durley?" (ನನ್ನ ತಂದೆಯ ಹೆಸರು) ಎಂದು ಕೇಳಿದನು. "ಅಲ್ಲ, ನಾನು! Bruce" ಎಂದು ಹೇಳಿದನು. "ಬ್ರುಸ್, ನಿಮ್ಮ ಧ್ವನಿ ನಿಮ್ಮ ತಂದೆಯ ಧ್ವನಿಯಂತೆಯೇ ಕೇಳಿಸುತ್ತದೆ" ಎಂದು ಅವರು ಉತ್ತರಕೊಟ್ಟರು.

ನಮ್ಮ ಧ್ವನಿಗಳು ಮಾತ್ರವೇ ಒಂದೇ ರೀತಿಯಲ್ಲಿ ಕೇಳಿಸುವದಿಲ್ಲ, ಇತ್ತೀಚೆಗೆ ನಾವು ನಿಜವಾಗಿ ಹೇಳುವಂಥದ್ದು ಹೆಚ್ಚು, ಹೆಚ್ಚು ಒಂದೇ ರೀತಿಯಲ್ಲಿ ಕೇಳಿಸುತ್ತದೆ. ಇತ್ತೀಚೆಗೆ ನನ್ನ ತಂದೆ ಬೇಟೆಯಾಡಲು ಬೇರೆ ಕಡೆಗೆ ಹೋಗಿದ್ದಾಗ, ನನ್ನ ತಾಯಿ ಒಂದು ವಾರ ನಮ್ಮೊಂದಿಗಿದ್ದಳು. ಆ ವಾರದಲ್ಲಿ ನಾನು ಹೇಳಿದ ಕೆಲವು ಮಾತುಗಳ ಬಗ್ಗೆ ನನ್ನ ಹೆಂಡತಿ ಮತ್ತು ನನ್ನ ತಾಯಿ ಒಬ್ಬರ ಕಡೆಗೆ ಒಬ್ಬರು ನೋಡಿ, "ಅವರು ತಮ್ಮ ತಂದೆಯಂತೆಯೆ ಮಾತಾಡುತ್ತಾರೆ!" ಎಂದು ಎಷ್ಟು ಸಲ ಹೇಳಿದರೆಂಬ ಲೆಕ್ಕ ನನ್ನಲ್ಲಿಲ್ಲ. ಇದಕ್ಕೆ ಹಿಂಬಾಲಿಸಿ "ಇದು ಭಯಪಡಿಸುವಂಥದ್ದಾಗಿದೆ. ಅಲ್ಲವೇ?" ಎಂದು ಉತ್ತರಿಸಲ್ಪಡುತ್ತಿತ್ತು.

ನಾನು ಮತ್ತು ತಂದೆ ಒಂದೇ ರೀತಿಯಲ್ಲಿ ಇರುವಂತೆ, ನಮ್ಮಲ್ಲಿ ವ್ಯತ್ಯಾಸಗಳು ಇದ್ದವು. ತಂದೆಯವರು ಒಬ್ಬ ಎಂಜಿನೀಯರರಾಗಿದ್ದರು ಮತ್ತು ನಾನು ಒಬ್ಬ ಪ್ರಸಂಗಿಯಾಗಿದ್ದೆನು. ಮಧ್ಯಾಹ್ನದಲ್ಲಿ ನಮಗೆ ಸಮಯವಿದ್ದಾಗ, ನನ್ನ ತಂದೆ ಏನನ್ನಾದರೂ ಕೂಡ್ರಿಸುವದರಲ್ಲಿ ಇಲ್ಲವೇ ಕಟ್ಟುವುದರಲ್ಲಿ ತೊಡಗಿರುತ್ತಿದ್ದರು ಮತ್ತು ನಾನು ಯಾವುದೇ ಮೂಲೆಯಲ್ಲಿ ಕುಳಿತುಕೊಂಡು ಪುಸ್ತಕಗಳನ್ನು ಓದುತ್ತಿದ್ದೆನು. ನಾವು ಒಂದೇ ರೀತಿಯಲ್ಲಿ ಇದ್ದರೂ, ಭಿನ್ನತೆಯುಳ್ಳವರಾಗಿದ್ದೆವು. ತನಗೂ ತನ್ನ ತಂದೆಗೂ ಮಧ್ಯದಲ್ಲಿದ್ದ ಸಂಬಂಧದ ಬಗ್ಗೆ ಯೇಸುವು ಮಾತನಾಡಿದ್ದು, ತಂದೆ ಮತ್ತು ಮಗನ ನಿಕಟ ಹೋಲಿಕೆಗಳನ್ನು ಒಳಗೊಂಡಿತ್ತು. ಯಾವ ಹೋಲಿಕೆಗಳಿಲ್ಲದೇ ಇರುವದನ್ನು ನಾವು ಸ್ವಾಭಾವಿಕವಾಗಿ ನಿರೀಕ್ಷಿಸಲಾರೆವು.

ಯೇಸುವು ದೇವರನ್ನು ತನ್ನ ತಂದೆಯಂತೆ ಮಾತಾಡಿದಾಗ, ಆತನು ತನ್ನ ಬಗ್ಗೆ ಹೇಳಿಕೆ ಕೊಟ್ಟಿದ್ದು ಯೆಹೂದಿ ನಾಯಕರಲ್ಲಿ ಕೋಪವನ್ನೆಬ್ಬಿಸಿತು. ನಡೆದಾಡದ ಮನುಷ್ಯನನ್ನು ಗುಣಪಡಿಸಿದ್ದನ್ನು ಹಿಂಬಾಲಿಸಿ, ಯೇಸುವಿನ ವಿರೋಧಿಗಳು ಆತನನ್ನು ಕೊಲ್ಲಲು ಬಯಸಿದಾಗ, ಅವರ ಕೋಪವು, "ಆತನು ಸಬ್ಬತ್ ದಿನವನ್ನು ಅಲಕ್ಷ ಮಾಡಿದ್ದಲ್ಲದೆ ದೇವರನ್ನು ತನ್ನ ತಂದೆ ಎಂದು ಹೇಳಿ ತನ್ನನ್ನು ದೇವರಿಗೆ ಸರಿಗಟ್ಟಿಕೊಂಡದ್ದರಿಂದ" ಆಗಿತ್ತು (5:18). ಅದು

ಕೋಪವನ್ನೆಬ್ಬಿಸುವ ಹೇಳಿಕೆಯಾಗಿದ್ದಿರ ಬಹುದು, ಆದರೆ ಅದು ಯೇಸುವಿನ ಸಂದೇಶಕ್ಕೆ ಕೇಂದ್ರವೂ ಉದ್ದೇಶವೂ ಆಗಿತ್ತು.

ದೇವರು "ತಂದೆಯಂತೆ" ಯೋಹಾನನ ಸುವಾರ್ತೆಯಲ್ಲಿ 122ಕ್ಕಿಂತ ಹೆಚ್ಚು ಸಲ ಉಪಯೋಗಿಸಲ್ಪಟ್ಟಿದೆ. ಯೇಸುವು, ದೇವರ ಕುಮಾರನಾಗಿರುವದರಿಂದ, "ತಂದೆಯು ಮಾಡುವುದನ್ನು ಕಂಡು ಮಗನು ಮಾಡುತ್ತಾನೆ" (5:19). ಯೇಸುವು ಭೂಲೋಕ ದಲ್ಲಿದ್ದಾಗ, ದೇವರೊಂದಿಗೆ ಆತನ ಸಂಬಂಧವು ನಿಕಟವಾಗಿತ್ತು, ಪ್ರೀತಿಯ ಮೇಲೆ ಅವಲಂಭಿಸಿತ್ತು ಹಾಗೂ ಸಂಪೂರ್ಣ ಸಂಪರ್ಕವನ್ನು ಒಳಗೊಂಡಿತ್ತು. ನನ್ನ ತಂದೆಗೂ ಮತ್ತು ನನಗೂ ಕೆಲವು ಗಮನಾರ್ಹವಾದ ಭಿನ್ನತೆಗಳಿದ್ದವು, ಆದರೆ ತಂದೆಗೂ ಕುಮಾರನಿಗೂ ಯಾವವು ಇರಲಿಲ್ಲ, ಅವರಿಗೆ ತ್ರೈಯೇಕತ್ವದೊಳಗೆ ಭಿನ್ನವಾದ ಕಾರ್ಯಗಳಿದ್ದರೂ ಅವರು ಗುಣಲಕ್ಷಣದಲ್ಲಿ, ದೃಢ ನಂಬಿಕೆಯಲ್ಲಿ ನಿಯೋಗದಲ್ಲಿ ಮತ್ತು ಹೃದಯದಲ್ಲಿ ಒಂದೇಯಾಗಿದ್ದರು. ತಂದೆ ಮತ್ತು ಕುಮಾರರ ಮಧ್ಯದಲ್ಲಿ ಸಂತತಿ ಅಂತರವಿರಲಿಲ್ಲ ಎಂದು ಬೇರೆ ಮಾತಿನಲ್ಲಿ ಹೇಳಬಹುದು.

ತಂದೆಯೂ ಕುಮಾರನೂ ತಾವು ಮಾಡುವಂಥದ್ದರಲ್ಲಿ (5:19, 20), ಜೀವ ಕೊಡುವ ತಮ್ಮ ಸಾಮರ್ಥ್ಯದಲ್ಲಿ (5:21), ಮತ್ತು ತಮ್ಮ ಗೌರವದ ಯೋಗ್ಯತೆಯಲ್ಲಿ (5:23) ಒಂದೇ ಯಾಗಿರುವರು ಎಂದು ಯೇಸು ಹೇಳಿದನು. ಅಂಥ ಹೇಳಿಕೆಗಳು ದೇವದೂಷಣೆಗಳಾ ಗಿವೆಯೆಂದು ಯೆಹೂದಿ ನಾಯಕರಿಂದ ಯೋಚಿಸಲ್ಪಟ್ಟವು ಮತ್ತು ಅಂಥ ಹೇಳಿಕೆಗಳೇ ಅನಂತರದಲ್ಲಿ ಯೇಸುವನ್ನು ಶಿಲುಬೆಗೆ ಹಾಕುವುದಕ್ಕೆ ನಡಿಸಿದವು. ಈ ಹೇಳಿಕೆಗಳನ್ನು ಮಾಡುವಲ್ಲಿ ಯೇಸುವು ತನ್ನ ವಿರೋಧಿಗಳಿಗೆ ವಿರುದ್ಧವಾಗಿ ತಾನು ಆತ್ಮಿಕ ಯುದ್ಧವನ್ನು ಸಾರುತ್ತಿದ್ದನೆಂದು ತಿಳಿದವನಾಗಿದ್ದನು.

## ಆತನ ದೈವಿಕ ನಿಯೋಗದ ಬಗ್ಗೆ ಹೇಳಿಕೆ (5:24-29)

5:24-29ರಲ್ಲಿ, ಯೇಸುವು ಎರಡು *ಮಹತ್ವದ* ಹೇಳಿಕೆಗಳನ್ನು ಕೊಟ್ಟನು. ಅವು ದೇವರ ಕುಮಾರನಂತೆ ಆತನನ್ನು ವಿಶೇಷವಾಗಿ ಬೇರ್ಪಡಿಸಿದವು. *ಮೊದಲನೆಯದು, ಆತನು ಜೀವವನ್ನು ಹೊಂದಿರುವೆನೆಂದೂ ಅದನ್ನು ಕೊಡುವೆನೆಂದೂ ಹೇಳಿದನು:*

> ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನು ನಿತ್ಯಜೀವವನ್ನು ಹೊಂದಿದ್ದಾನೆ. ಅವನು ತೀರ್ಪಿಗೆ ಗುರಿಯಾಗುವದಿಲ್ಲ; ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ, ನಿಮಗೆ ನಿಜನಿಜವಾಗಿ ಹೇಳುತ್ತೇನೆ. ಸತ್ತವರು ದೇವಕುಮಾರನ ಧ್ವನಿಯನ್ನು ಕೇಳುವ ಕಾಲ ಬರುತ್ತದೆ, ಈಗಲೇ ಬಂದಿದೆ; ಕೇಳಿದವರು ಬದುಕುವರು, ತಂದೆಯು ತಾನು ಹೇಗೆ ಸ್ವತಃ ಜೀವವುಳ್ಳನಾಗಿದ್ದಾನೋ ಹಾಗೆಯೇ ಮಗನು ಸ್ವತಃ ಜೀವವುಳ್ಳವನಾಗಿರುವಂತೆ ಮಾಡಿದನು (5:24-26).

ತಂದೆಯು ದೊಡ್ಡ ಜೀವದಾಯಕನಂತೆ ದೃಷ್ಟಿಸಲ್ಪಟ್ಟದ್ದರಿಂದ, ಈ ಹೇಳಿಕೆ ಕೊಡುವಂಥದ್ದು ಪುನಃ "ತನ್ನನ್ನು ದೇವರಿಗೆ ಸರಿಸಮಾನನನ್ನಾಗಿ ಮಾಡಿಕೊಳ್ಳುವುದಾಗಿದೆ" (5:18).

*ಎರಡನೆಯದು, ಅಂತ್ಯ ಸಮಯದಲ್ಲಿ ನ್ಯಾಯ ತೀರ್ಪನ್ನು ಕೊಡುವಾತನು ತಾನೇ ಎಂದು ಆತನು ಹೇಳಿದನು:*

> ಮತ್ತು ಮಗನು ಮನುಷ್ಯ ಕುಮಾರನಾಗಿರುವದರಿಂದ ತೀರ್ಪುಮಾಡುವ ಅಧಿಕಾರವನ್ನು ಅವನಿಗೆ ಕೊಟ್ಟನು. ಅದಕ್ಕೆ ಆಶ್ಚರ್ಯಪಡಬೇಡಿರಿ; ಸಮಾಧಿಗಳಲ್ಲಿರುವವರೆಲ್ಲರೂ ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೆಯದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವುದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ

ಪುನರುತ್ಥಾನವಾಗುವುದು (5:27-29).

ತನ್ನ ಧ್ವನಿಯು ಒಂದು ದಿನ ಸತ್ತವರನ್ನು "ಜೀವದ ಪುನರುತ್ಥಾನಕ್ಕಾಗಿ" ಇಲ್ಲವೇ "ನ್ಯಾಯ ತೀರ್ವಿಕೆಯ ಪುನರುತ್ಥಾನಕ್ಕಾಗಿ" ಎಬ್ಬಿಸುವುದು ಎಂದು ಆತನು ಹೇಳಿದನು (ವಚನ 29).

ನ್ಯಾಯ ತೀರ್ವಿಕೆಯ ಬಗ್ಗೆ ಯೇಸುವು ಹೇಳಿದ್ದು, ಮೊದಲನೆಯ ಶತಮಾನದಲ್ಲಿದ್ದವರಿಗೆ ಅದು ಮಾಡಿದಂತೆ ಆಧುನಿಕ ಕೇಳುಗರಿಗೂ ಹೆಚ್ಚಾಗಿ ಆತನನ್ನು ಪ್ರೀತಿಪಾತ್ರನನ್ನಾಗಿ ಮಾಡಲಿಲ್ಲ. ಅಂತಿಮ ನ್ಯಾಯತೀರ್ವಿಕೆಯ ತತ್ವವು ಸಮಾಜದಿಂದಲೂ ಹೆಚ್ಚಾದ ಕ್ರೈಸ್ತರಿಂದಲೂ ಸಾಮಾನ್ಯವಾಗಿ ಗೇಲಿ ಮಾಡಲ್ಪಟ್ಟಿದೆ. ಅದರ ಅಪ್ರಿಯತೆಯೇ ಅದಕ್ಕೆ ಕಾರಣವಾಗಿದೆ. ಯೇಸುವು ನ್ಯಾಯತೀರ್ವಿಕೆಯ ಬಗ್ಗೆ ನಿರ್ಬಂಧವಿಲ್ಲದೇ ಮಾತನಾಡಿದನೆಂದು ಈ ವಾಕ್ಯಭಾಗವು ಜ್ಞಾಪಕಕ್ಕೆ ತರುತ್ತದೆ. ಹೊಸ ಒಡಂಬಡಿಕೆಯಲ್ಲಿ ನ್ಯಾಯ ತೀರ್ವಿಕೆಯ ಬಗ್ಗೆ ಬೇರೆ ಯಾರಿಂದಲೂ ಹೇಳಿದ್ದಕ್ಕಿಂತ ಹೆಚ್ಚು ಯೇಸುವು ಹೇಳಿದ್ದಾನೆ. ಆತನ ಬೋಧನೆಯ ಈ ಭಾಗವನ್ನು ವರ್ಜಿಸುವುದು ಅಗತ್ಯವಾದ ಸತ್ಯವನ್ನು ಅಲ್ಲಗಳೆಯುವುದು ಮತ್ತು ಪರಿಶುದ್ಧ ಜೀವನಕ್ಕಾಗಿ ಬದಲಾದ ಪ್ರೇರೇಪಣೆಯಿಂದ ನಮ್ಮನ್ನು ಬೇರ್ಪಡಿಸಿಕೊಳ್ಳುವುದು ಆಗುತ್ತದೆ. ಇದಲ್ಲದೇ, ಅಂತ್ಯ ಸಮಯದ ಸಮರ್ಪಕ ಬೋಧನೆಯಿಲ್ಲದೆ ಸಭೆಯಲ್ಲಿ ಸೇವೆಗಳಿಗಾಗಿ ಉತ್ಸಾಹವಿರುವದಿಲ್ಲ. ನ್ಯಾಯತೀರ್ವಿಕೆಯ ದಿನದೊಂದಿಗೆ ನಮಗೆ ಸಂಬಂಧವಿಲ್ಲದಿದ್ದರೆ, ವಿದೇಶ ಗಳಲ್ಲಿಯೂ ನಮ್ಮ ಜೀವಿಗಳಲ್ಲಿಯೂ ಸುವಾರ್ತೆಯನ್ನು ಹಂಚಿಕೊಳ್ಳಲು ಪ್ರೇರೇಪಣೆ ಇರುವುದಿಲ್ಲ!

ತನ್ನ ದೈವಿಕ ನಿಯೋಗದ ಬಗ್ಗೆ ಯೇಸುವಿನ ಹೇಳಿಕೆಗಳಿಂದ ಆತನ ಕೇಳುಗರನ್ನು ತಾನು ಯಾರಾಗಿದ್ದೇನೆ ಎಂಬುದರ ಮೇಲಿನ ಪ್ರಾಧಾನ್ಯತೆಗಿಂತ - ಆತನು ಏನು ಮಾಡುತ್ತಿದ್ದನು ಎಂಬುದರ ಮೇಲೆ ಹೆಚ್ಚು ಪ್ರಾಧಾನ್ಯತೆ ಕೊಡಲ್ಪಟ್ಟಿದೆ. ದೇವರ ಕುಮಾರನಾಗಿರುವೆನೆಂಬ ಆತನ ಹೇಳಿಕೆಗಳು ದೇವರ ಕಾರ್ಯಕ್ಕೆ ಆತನ ಶ್ರದ್ಧೆಯನ್ನು ಒಪ್ಪಿಸುತ್ತವೆ. ಆತನು ತಂದೆಯ ಕಾರ್ಯವನ್ನು ಮಾಡುತ್ತೇನೆಂದು ಹೇಳಿದಾಗ, ಯೇಸುವು ಯೆಹೂದಿ ನಾಯಕರನ್ನು ಎದುರಿಸುವದನ್ನು ಮುಂದರಿಸಿದನು. ಇದರ ನಂತರ ಹಿಂದಿರುಗಿ ಹೋಗುವುದು ಇರಲೇ ಇಲ್ಲ!

## ಆತನ ಸಾಕ್ಷಿಗಳ ಹೇಳಿಕೆ (5:30-47)

ಯೇಸುವು, ಕ್ರಿಸ್ತನು, ದೇವರ ಕುಮಾರನು ಆಗಿದ್ದಾನೆಂಬುದನ್ನು ಯಾವ ಆಧಾರದ ಮೇಲೆ ನಂಬುತ್ತೀರಿ? ನಿಮ್ಮ ನಂಬಿಕೆಯ ಬಗ್ಗೆ ನ್ಯಾಯಾಲಯದಲ್ಲಿ ಸಾಕ್ಷಿ ಕೊಡಲು ಕರೆಯಲ್ಪಟ್ಟರೆ "ನೀವು ಯಾಕೆ ನಂಬುತ್ತೀರಿ?" ಎಂಬ ಪ್ರಶ್ನೆಗೆ ನೀವು ಹೇಗೆ ಉತ್ತರ ಕೊಡುವಿರಿ. "ರವಿ ಜಕರಿಯಾಸ, ಒಬ್ಬ ಆಧುನಿಕ ಧರ್ಮಪ್ರತಿಪಾದಕನು, ಇತ್ತೀಚೆಗೆ ಹೀಗೆ ಹೇಳಿದನು" "ಇಂದು ನಾವು ಪದವೀಧರ ಮಟ್ಟದ ನಾಸ್ತಿಕತ್ವದ ಜಗತ್ತಿನಲ್ಲಿ ಜೀವಿ ಸುತ್ತಿದ್ದೇವೆ. ಪದವೀಧರನಲ್ಲದ ಉತ್ತರವು ನಡೆಯುವುದಿಲ್ಲ. ನಾವು ಜಗತ್ತಿನ ಅತೀ ಕಠಿಣವಾದ ಪ್ರಶ್ನೆಗಳಿಗೆ ಉತ್ತರಕೊಡಲು ನಾವು ಸನ್ನದ್ಧರಾಗಿರತಕ್ಕದ್ದು"[1] ಕೇಂಬ್ರಿಜ್ ಯುನಿವರ್ಸಿಟಿಯಲ್ಲಿ ಕೆಲವು ಪ್ರಸಿದ್ಧ ನಾಸ್ತಿಕರ ಕೆಳಗೆ ಅಧ್ಯಾಯನ ಮಾಡಲು ಸಂದರ್ಶಕ ವಿದ್ಯಾರ್ಥಿಯ ಸ್ಥಾನ ತೆಗೆದು ಕೊಳ್ಳುವ ಬಗ್ಗೆ ಅವನ ತೀರ್ಮಾನದ ಬಗ್ಗೆ ಕೇಳಿದಾಗ ಜಕರಿಯಾಸನು ಈ ಉತ್ತರವನ್ನು ಕೊಟ್ಟನು:

> ಹೆಚ್ಚಾದ ಸುವಾರ್ತಾ ಸೇವೆಯು ಸಂದಿಗ್ಧ ಪರಿಸ್ಥಿತಿಯಲ್ಲಿರುವ ಜನರ ಕಡೆಗೆ ಸಂಬಂಧಿಸಿದ್ದಾಗಿರುತ್ತದೆ. ಆದರೆ ದೇವರಿಗಾಗಿ ಅವಶ್ಯಕತೆಯಿಲ್ಲವೆಂದು ಭಾವಿಸುವ ಅಗಣಿತ ಜನರನ್ನು ನಾವು ತಲುಪುವುದು ಹೇಗೆ? ಸಮರ್ಥನೀಯವಾದ, ಒತ್ತಡವುಳ್ಳವಾದ ವಿವಾದಗಳಿಂದ ನಾನು ಉತ್ತರ ಕೊಡಲಿಕ್ಕಾಗುವಂತೆ ನಮ್ಮ ಸಮಯಗಳ ಅತ್ಯುತ್ತಮ ನಾಸ್ತಿಕ ವಿಚಾರಕರ ಕೆಳಗೆ ಅಧ್ಯಾಯನ ಮಾಡಲು ಬಯಸುವುದಕ್ಕೆ ನನಗೆ ಕಾರಣವಾಯಿತು.

ಯೋಚಿಸುವವನಿಗೆ - ಯಥಾರ್ಥವಾದ ನಾಸ್ತಿಕನಿಗೆ, ಹ್ಯಾಪ್ಪಿ ಪೇಗನ್ ಎಂದು ನಾನು ಕರೆಯುವದಕ್ಕೆ ಒಬ್ಬ ಸುವಾರ್ತಿಕನಾಗಲು ಬಯಸಿದೆನು.[2]

ನಮ್ಮ ಮೂಲಪಾಠದಲ್ಲಿ, ಉತ್ತಮವಾದ ನ್ಯಾಯವಾದಿಯು ಮಾಡುವಂತೆ, ಯೇಸುವು ತನ್ನನ್ನು ದೇವರ ಕುಮಾರನಂತೆ ಗುರುತಿಸಲು ಸಾಕ್ಷಿಗಳನ್ನು ಮುಂದಿಟ್ಟನು. ಮೊದಲನೆಯದು, ಆತನು *ತಂದೆಯ ಸಾಕ್ಷಿಯನ್ನು ಹೇಳಿದನು* (5:32, 37). ಆಮೇಲೆ *ಸ್ನಾನಿಕನಾದ ಯೋಹಾನನ* ಸಾಕ್ಷಿಯಿತ್ತು (5:33). ಯೋಹಾನನ ಸಾಕ್ಷಿಯು ಇಂದು ನಮಗೆ ಮಹತ್ವವಿಲ್ಲದ್ದಾಗಿ ತೋರಬಹುದು, ಆದರೆ ಮೊದಲನೆಯ ಶತಮಾನದಲ್ಲಿ ಅದು ಆ ದಿನದ ಪ್ರಾಥಮಿಕ ಬಹಿರಂಗದ ವ್ಯಕ್ತಿಗಳಲ್ಲಿ ಒಬ್ಬನ ಸಾಕ್ಷಿಯಾಗಿತ್ತು. ಯೇಸುವು ತನ್ನ ಸ್ವಂತ ಅದ್ಭುತ ಕಾರ್ಯಗಳನ್ನು ತನ್ನ ಕುಮಾರತ್ವಕ್ಕೆ ಒಂದು ಸಾಕ್ಷಿಯಾಗಿ ಕರೆದನು (5:36). ಯೇಸುವಿನ ನಾಲ್ಕನೆಯ ಸಾಕ್ಷಿಯು ಪರಿಶುದ್ಧ ಬರಹಗಳಾಗಿವೆ (5:39). ಒಟ್ಟಾಗಿ, ಈ ಸಾಕ್ಷಿಗಳು ಯೇಸುವಿನ ಹೇಳಿಕೆಗಳಿಗೆ ಪರವಾದ ಬಲವಾದ ಉದಾಹರಣೆಯಾದವು.

ಪರಿಶುದ್ಧ ಬರಹಗಳ ಅಂತಿಮ ಗುರಿಯನ್ನು ತಪ್ಪಿಸಿಕೊಳ್ಳಲಿಕ್ಕೆ ಯೆಹೂದಿ ನಾಯಕರು ಪರಿಶುದ್ಧ ಬರಹಗಳನ್ನು ಹುಡುಕಿದ ರೀತಿಯ ವ್ಯಂಗ್ಯವನ್ನು ಯೇಸುವು ಗಮನಿಸಿದನು: ಯೇಸು ಕ್ರಿಸ್ತನಾಗಿದ್ದ ಸಾಕ್ಷಿಯನ್ನೇ ಅವರು ಕಂಡುಕೊಳ್ಳಲಿಲ್ಲ! ಜೊರ್ಜಿಯದ ಅಟ್ಲಾಂಟಾದಲ್ಲಿ ಒಂದು ದೇವಾಲಯದ ಪ್ರವೇಶದ ಬಳಿಯಲ್ಲಿಯ ಗೋಡೆಯ ಮೇಲೆ ನೇತಾಡುತ್ತಿದ್ದ ಒಂದು ಚಿತ್ರದ ಬಗ್ಗೆ ನಾನು ಇತ್ತೀಚೆಗೆ ಓದಿದೆನು. ಈ ಚಿತ್ರವು, ಯೇಸುವಿನ ಚಿತ್ರವು ಕೆಲವು ಕೊರಿಯಾದ ಸೈನ್ಯದ ಅಧಿಕಾರಿಗಳಿಂದ ಕೊಡಲ್ಪಟ್ಟಿತು. ತನ್ನ ಮಂದೆಯ ಮೇಲೆ ಕಾವಲು ಕಾಯುತ್ತಿದ್ದ ಒಳ್ಳೇ ಕುರುಬನಂತೆ ಯೇಸುವಿನ ರೂಪವನ್ನು ಗುರುತಿಸಲು ಒಬ್ಬ ವ್ಯಕ್ತಿಗೆ ಸಾಮಾನ್ಯವಾದ ನೋಟವು ಮಾತ್ರ ಅಗತ್ಯವಾಗಿತ್ತು. ಒಬ್ಬನು ಚಿತ್ರದ ಸಮೀಪಕ್ಕೆ ಹೋಗುವಾಗ, ಚಿತ್ರಕಾರನು ಹೊಸ ಒಡಂಬಡಿಕೆಯ ಎಲ್ಲಾ ಪದಗಳನ್ನು ಉಪಯೋಗಿಸುವುದರಿಂದ ಚಿತ್ರವನ್ನು ಸೃಷ್ಟಿಸಿದ್ದನೆಂಬುದನ್ನು ಗುರುತಿಸುವನು! ನೋಡುತ್ತಿರುವವನು ಎಲ್ಲಾ ಚಿಕ್ಕ ಪದಗಳನ್ನು ನೋಡು ವಷ್ಟು ಸಮೀಪಕ್ಕೆ ಹೋಗುವಾಗ, ಅವನು ಚಿತ್ರವನ್ನು ನೋಡುವ ಸಾಮರ್ಥ್ಯವನ್ನು ಕಳೆದು ಕೊಳ್ಳುವನು. ಇದನ್ನೇ ಯೆಹೂದಿ ನಾಯಕರು ಮಾಡಿದರು. ವೈಯಕ್ತಿಕ ಹೇಳಿಕೆಗಳನ್ನು ಅವರು ದೊಡ್ಡದನ್ನಾಗಿ ಮಾಡಿದರು ಮತ್ತು ಇಡೀ ಕಾರ್ಯವು ಯಾವುದನ್ನು ಪ್ರಕಟಿಸಲು ರಚಿಸಲ್ಪಟ್ಟಿದೆ ಎಂಬುದನ್ನು ಮರೆತು ಬಿಟ್ಟರು.

ತನ್ನ ಪರವಾಗಿ ವಾದಿಸಲು ಯೇಸುವು ಕರೆದ ಅಂತಿಮ ಸಾಕ್ಷಿಯು ಮೋಶೆಯು (5:46). ಯೇಸುವನ್ನು ಆತನ ವಿರೋಧಿಗಳು ಧರ್ಮಶಾಸ್ತ್ರಕೊಟ್ಟವನ ವೈರಿಯಾಗಿದ್ದವನಂತೆ ನೋಡಿ ದರು, ಆದರೆ ಯೇಸುವು "ನೀವು ಮೋಶೆಯ ಮಾತನ್ನು ನಂಬುವವರಾಗಿದ್ದರೆ ನನ್ನ ಮಾತನ್ನೂ ನಂಬುತ್ತಿದ್ದಿರಿ" (5:46) ಎಂದು ಹೇಳಿದನು. ಮೊದಲು ಯಾವುದಾದರೂ ಸಂಶಯವಿದ್ದರೆ, ಯೇಸುವು, ಈ ಹೇಳಿಕೆಗಳನ್ನು ಕೊಟ್ಟಾಗ ಮುಕ್ತಾಯವಾಗಿ "ರುಬಿಕೊನನ್ನು ದಾಟಿದನು." ಈ ಹೇಳಿಕೆಗಳನ್ನು ತಂದೆಯಾದ ದೇವರ ಬಗ್ಗೆ, ಸ್ನಾನಿಕನಾದ ಯೋಹಾನನ ಬಗ್ಗೆ, ತನ್ನ ಸ್ವಂತ ಕಾರ್ಯಗಳ ಬಗ್ಗೆ, ಪರಿಶುದ್ಧ ಬರಹಗಳ ಬಗ್ಗೆ, ಮತ್ತು ಮೋಶೆಯ ಬಗ್ಗೆ, ಕೊಟ್ಟ ನಂತರ, ಯೇಸುವು ಬೆನ್ನು ಹಾಕಲಿಲ್ಲ!

## ಮುಕ್ತಾಯ

ಇಂದು ಹೆಚ್ಚಾದ ಜನರು ಸತ್ಯಕ್ಕಾಗಿ ಬಲವಾಗಿ ನಿಂತುಕೊಳ್ಳುವದಿಲ್ಲ. ಪ್ರಮುಖ ಸಾಂಸ್ಕೃತಿಕ ಒತ್ತಡವು ಬಹುತತ್ವವಾದವಾಗಿದೆ - ನಿರಕುಂಶ ಸತ್ಯದ ತತ್ವದಿಂದ ದೂರವಾ ಗಿರುವ ಮತ್ತು ಪ್ರತಿಯೊಂದರಲ್ಲಿ ಸಾಪೇಕ್ಷತೆಯ ಕಡೆಗಿರುವ ಒಂದು ಚಳವಳವಾಗಿದೆ. ಎಲ್ಲಾ ಜನಾಂಗಗಳು ಮತ್ತು ಎಲ್ಲಾ ಧರ್ಮಗಳು ತಮ್ಮ ಸ್ವಂತ ಮಾರ್ಗದಲ್ಲಿ ಸರಿಯಾಗಿರುವವೆಂದು

ದೃಷ್ಟಿಸಲ್ಪಟ್ಟಿವೆ. ನಮ್ಮ ಕೆಲಸವು ಜೀವಿತವನ್ನು ಇತರರ ದೃಷ್ಟಿಕೋನದಿಂದ ನೋಡುವುದು ಹಾಗೂ ಇತರರ ದೃಷ್ಟಿಕೋನಗಳನ್ನು ಸ್ವೀಕರಿಸುವುದು ಎಂದು ನಮಗೆ ಹೇಳಲ್ಪಟ್ಟಿದೆ, ನಾವು ಅಧ್ಯಾಯನ ಮಾಡಿದ ಮೂಲಪಾಠದಲ್ಲಿ, ಯೇಸುವು ನಮ್ಮ ಲೋಕದೊಳಗೆ ಹೆಜ್ಜೆ ಇಡುತ್ತಾನೆ ಮತ್ತು ತಿರುಳಿನಲ್ಲಿ ಹೀಗೆ ಹೇಳುತ್ತಾನೆ. "ನನ್ನ ಜನರು ಎಲ್ಲಾ ಜನರನ್ನು ಗೌರವಿಸಬೇಕು, ಎಲ್ಲಾ ಜನರನ್ನು ಪ್ರೀತಿಸಬೇಕು, ಮತ್ತು ಎಲ್ಲಾ ಜನರನ್ನು ಅರ್ಥಮಾಡಿಕೊಳ್ಳಲು ಹುಡುಕ ಬೇಕು, ಹೀಗಿದ್ದರೂ, ಕೆಲವು ತತ್ವಗಳನ್ನು ಸಂದಾನಪಡಿಸಲಾಗದು. ಕೆಲವು ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರ ಬಗ್ಗೆ ಯಾರಾದರೂ ಅದರ ಬಗ್ಗೆ ಏನನ್ನಾದರೂ ಯೋಚಿಸಿದರೂ ಹಿಂಜರಿಯದೇ ಪರಿಪೂರ್ಣಸತ್ಯದಂತೆ ಘೋಷಿಸಲ್ಪಡತಕ್ಕದ್ದು."

ಜಿ. ಕ್ಯಾಂಬೆಲ್ ಮೊರ್ಗನ್, "ಬೈಬಲ್ ವ್ಯಾಖ್ಯಾನಕಾರರ ರಾಜಕುಮಾರನು" ಈ ಮೂಲಪಾಠದ ಬಗ್ಗೆ ಒಮ್ಮೆ ಹೀಗೆ ಹೇಳಿದನು, "ಮಾನವ ಮಟ್ಟದಲ್ಲಿ ಆ ದಿನ ಯೇಸುವು ಮಾಡಿದ್ದಕ್ಕೆ ಮತ್ತು ಆತನು ಹೇಳಿದ್ದಕ್ಕೆ ಆತನು ತನ್ನ ಜೀವವನ್ನು ಕ್ರಯವಾಗಿ ಕೊಡ ಬೇಕಾಯಿತು. ಅವರು ಆತನನ್ನು ಎಂದೂ ಕ್ಷಮಿಸಲಿಲ್ಲ."[3] 5ನೆಯ ಅಧ್ಯಾಯದಲ್ಲಿ ಯೇಸುವು "ರುಚಿಕೊನನ್ನು ದಾಟಿದನು" ಎಂದು ಹೇಳುವ ಇನ್ನೊಂದು ವಿಧವಾಗಿದೆ. ಆತನೊಂದಿಗೆ ದಾಟುವದಕ್ಕಿಂತ ಕಡಿಮೆಯಾದ ಯಾವುದನ್ನು ನಾವು ಮಾಡಲಾರೆವು.

ಟಿಪ್ಪಣಿಗಳು

[1]Ravi Zacharias, "Reaching the Happy Pagans," *Christianity Today* (14 November 1994), 18. [2]Ibid. [3]Leon Morris, *Expository Reflections on the Gospel of John* (Grand Rapids, Mich.: Baker Book House, 1988), 193.